ದಿನಾಂಕ 22-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿಗಳ ಪರ ಶ್ರೀ ಎಂ.ಎಸ್.ಹೆಚ್ ವಕೀಲರಿಂದಃ**

ನನ್ನ ಪೂರ್ಣ ಹೆಸರು ಅಬ್ದುಲ್ ರಜಾಕ್ ಬಿನ್ ಗರಿಬದಿವಾನ್ ಬಂದಗಿ. ನನ್ನ ಆಧಾರ್ ಕಾರ್ಡಿನಲ್ಲಿ ಇದೇ ಹೆಸರು ನಮೂದಾಗಿರುತ್ತದೆ. ನನಗೆ ಕನ್ನಡ ಭಾಷೆ ಓದಲು, ಬರೆಯಲು ಸ್ವಲ್ಪ ಸ್ವಲ್ಪ ಬರುತ್ತದೆ. ನಾನು ಉರ್ದು ಮಾಧ್ಯಮದಲ್ಲಿ 10 ನೇ ತರಗತಿವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ಉರ್ದು ಭಾಷೆಯನ್ನು ನನಗೆ ಓದಲು, ಬರೆಯಲು ಬರುತ್ತದೆ. ಉರ್ದು ಭಾಷೆಯನ್ನು ನನಗೆ ಓದಲು, ಬರೆಯಲು ಬರುತ್ತದೆ ಹಾಗೂ ಉರ್ದು ಭಾಷೆಯಲ್ಲಿ ಸಹಿ ಮಾಡುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉರ್ದು ಭಾಷೆಯಲ್ಲಿ ಹೇಗೆ ಸಹಿ ಮಾಡುತ್ತಾರೆ ಎಂದು ನನಗೆ ಬರದೇ ಇದ್ದರೂ ಸಹ ಈ ಪ್ರಕರಣಕ್ಕಾಗಿ ನನಗೆ ಉರ್ದು ಭಾಷೆ ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ತಂದೆಗೆ ಗರಿಬ ದಿವಾನ್ ಹಾಗೂ ಗರಿಬ ಸಾಬ್ ಎಂದು ಸಹ ಕರೆಯುತ್ತಿದ್ದರು. ಅವರಿಗೆ ಎರಡೂ ಹೆಸರುಗಳಲ್ಲಿ ಕರೆಯುತ್ತಿದ್ದರು ಎಂಬ ಬಗ್ಗೆ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವುದಿಲ್ಲ. ನನ್ನ ತಂದೆ ಹೆಸರು ಗರಿಬ ದಿವಾನ್ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾನ್ಯ ಹೆಚ್ಚುವರಿ ಹಿರಿಯ ನ್ಯಾಯಾಲಯದಲ್ಲಿ ನಾನು ಓ ಎಸ್ 38/2021 ದಾವೆ ಸಲ್ಲಿಸಿದ್ದು, ನಂತರ ಅದು ರಾಜೀ ಆಗಿರುತ್ತದೆ ಎಂದರೆ ನನಗೆ ನೆನಪಿಲ್ಲ. ಸದರಿ ದಾವೆ ತೀರ್ಪಿನ ಮುಖಾಂತರ ಅಥವಾ ರಾಜಿಯ ಮುಖಾಂತರ ಇತ್ಯರ್ಥ ಆಗಿರುತ್ತದೆ ಎಂದರೆ ನನಗೆ ನೆನಪಿಲ್ಲ. ಸದರಿ ದಾವೆಯಲ್ಲಿ

ನಾನು ಹಾಗೂ ನನ್ನ ಸಹೋದರರ ಮನೆ, ಆಸ್ತಿಗಳಿಗೆ ಸಂಬಂಧಿಸಿದಂತೆ ರಾಜಿಯನ್ನು ಮಾಡಿಕೊಂಡಿರುತ್ತೇವೆ ಎಂದರೆ ನನಗೆ ನೆನಪಿಲ್ಲ. ಸದರಿ ದಾವೆಯಲ್ಲಿ ನನ್ನ ಹೆಸರು ಅಬ್ದುಲ್ ರಜಾಕ್ ತಂದೆ ಗರೀಬ ಸಾಬ್ ಬಂದಗಿ ಎಂದು ನಮೂದು ಆಗಿರುತ್ತದೆ ಎಂದರೆ ಎರಡೂ ಹೆಸರು ಗರೀಬ ದಿವಾನ್ ಹಾಗೂ ಗರೀಬ ಸಾಬ್ ನನ್ನ ತಂದೆಯ ಹೆಸರುಗಳು ಇರುತ್ತವೆ. ನನ್ನ ತಂದೆಯ ಹೆಸರು ಗರೀಬ ದಿವಾನ್ ಇರುವುದಿಲ್ಲ, ಈ ದಾವೆಗೋಸ್ಕರ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಸದರಿ ದಾವೆಯನ್ನು ಯಾರು ಯಾರ ಮೇಲೆ ಸಲ್ಲಿಸಿರುತ್ತಾರೆ ನನಗೆ ಗೊತ್ತಿಲ್ಲ. ಅದೇ ರೀತಿ ಸದರಿ ದಾವೆಯಲ್ಲಿ ಯಾವ ಪರಿಹಾರವನ್ನು ಕೋರಿಕೊಂಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಸಂಖ್ಯೆ ನನಗೆ ಗೊತ್ತಿಲ್ಲ. ಅದರ ಅಳತೆ ಅಂದಾಜು ಅಗಲ–22 ಫೂಟ್, ಉದ್ದ – 100 ಚಿಲ್ಲರೆ ಇರುತ್ತದೆ. 22 ಫೂಟ್ ಅಗಲ ಪೂ–ಪ– ಇರುತ್ತದೆ. ನಿ.ಡಿ–5 ರಂತೆ ಆದಂತಹ ಖರೀದಿ ವ್ಯವಹಾರಕ್ಕೆ ನಾನು ಭಾಗವಹಿಸಿರುವುದಿಲ್ಲ. ಸದರಿ ಖರೀದಿ ಪತ್ರವನ್ನು ನಾನು ನೋಡಿರುತ್ತೇನೆ. ಸದರಿ ಖರೀದಿ ಪತ್ರವನ್ನು 5–6 ವರ್ಷಗಳ ಹಿಂದೆ ನೋಡಿರುತ್ತೇನೆ. ಸದರಿ ಖರೀದಿ ಪತ್ರವನ್ನು ನಾನು ಎಲ್ಲಿ ನೋಡಿರುತ್ತೇವೆ ಎಂದು ನನಗೆ ನೆನಪಿಲ್ಲ. ಆ ನಂತರ ಅದನ್ನು ನಾನು ನೋಡಿರುವುದಿಲ್ಲ. ಆ ಬಗ್ಗೆ ನನ್ನ ತಂದೆಯಿಂದ ಕೇಳಿಕೊಂಡಿರುತ್ತೇನೆ. 5–6 ವರ್ಷಗಳ ಹಿಂದೆ ಸದರಿ ಖರೀದಿ ಪತ್ರವನ್ನು ಯಾವ ಕಾರಣಕ್ಕೆ ನಾನು ನೋಡಿರುತ್ತೇನೆ ನನಗೆ ನೆನಪಿಲ್ಲ.

4. ನನ್ನ ತಂದೆ ಹೆಸರು ಗರೀಬ ದಿವಾನ್ ಬಿನ್ ಗೌಸುಸಾಬ್ ಬಂದಗಿ. ಈ ರೀತಿ ನನ್ನ ತಂದೆಯವರು ಊರಿನಲ್ಲಿ ಎಷ್ಟು ಪತ್ರಗಳಿಗೆ ಸಹಿ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆಯವರು ಅಂದಾಜು 50–60 ಪತ್ರಗಳಿಗೆ ಸಹಿ ಮಾಡಿರುತ್ತಾರೆ ಎಂದರೆ



ನನಗೆ ಗೊತ್ತಿಲ್ಲ. ಅವರು ಎಷ್ಟು ಪತ್ರಗಳಿಗೆ ಸಹಿ ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ನನ್ನ ತಂದೆಯವರು ನಮ್ಮ ಸಮಾಜದಲ್ಲಿ ಪಂಚರು ಇದ್ದರು. ಆ ಸಮಯದಲ್ಲಿ ಪತ್ರಗಳು ಆಗುವ ಸಂದರ್ಭದಲ್ಲಿ ನನ್ನ ತಂದೆಯವರಿಗೆ ಕರೆದುಕೊಂಡು ಹೋಗುತ್ತಿದ್ದರು ಎಂದರೆ ಕೆಲವು ಜನ ಕರೆದುಕೊಂಡು ಹೋಗುತ್ತಿದ್ದರು.

5. ನನ್ನ ತಂದೆಯವರು 20 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ನನ್ನ ತಂದೆಯವರು ಯಾವ ಯಾವ ಪತ್ರಗಳಿಗೆ ಸಹಿ ಮಾಡಿರುತ್ತಾರೆ ಎಂದರೆ ಈ ಪತ್ರಕ್ಕೆ ಸಹಿ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಾಗಿರುತ್ತದೆ. ಸಹಜವಾಗಿ ಮನೆಯಲ್ಲಿ ಮಾತಾಡುವ ಸಮಯದಲ್ಲಿ ಸದರಿ ಪತ್ರಕ್ಕೆ ಸಹಿ ಮಾಡಿರುವ ಬಗ್ಗೆ ನನ್ನ ತಂದೆ ನನಗೆ ತಿಳಿಸಿರುತ್ತಾರೆ. ನನ್ನ ತಂದೆಯವರು ಹೀಗೆ ಸಹಿ ಮಾಡುತ್ತಿದ್ದರು ಎಂಬ ಬಗ್ಗೆ ಯಾವ ದಾಖಲಾತಿಗಳನ್ನು ನಾನು ನೋಡಿರುತ್ತೇನೆ ಎಂದರೆ ಉರ್ದು ಭಾಷೆಯಲ್ಲಿ ಇರುವದನ್ನು ನಾನು ನೋಡಿ ಹೇಳಿರುತ್ತೇನೆ. ನನ್ನ ಸಮಕ್ಷಮದಲ್ಲಿ ನನ್ನ ತಂದೆಯವರು ದಾಖಲಾತಿಗಳಿಗೆ ಸಹಿಯನ್ನು ಮಾಡುತ್ತಿರುವಾಗ ನಾನು ನೋಡಿರುತ್ತೇನೆ. ಮುನ್ಸಿಪಾಲ್ಟಿ ರವರಿಗೆ ಕಟ್ಟುವ ಟ್ಯಾಕ್ಸ ದಾಖಲಾತಿಗಳಿಗೆ ಅವರು ಸಹಿಯನ್ನು ಮಾಡುತ್ತಿದ್ದರು. ನೋಂದಾದ ದಾಖಲಾತಿಗಳಲ್ಲಿ ಅವರು ಸಹಿಯನ್ನು ಮಾಡುತ್ತಿರುವ ಬಗ್ಗೆ ನಾನು ನೋಡಿರುತ್ತೇನೆ. ನನ್ನ ತಂದೆಯ ಹೆಸರಿನಲ್ಲಿ ಖರೀದಿ ಆಗುವ ದಾಖಲಾತಿಗಳಲ್ಲಿ ನಾನು ಅವರ ಸಹಿಯನ್ನು ನೋಡಿರುತ್ತೇನೆ. ಅವರು ಉರ್ದು ಭಾಷೆಯಲ್ಲಿ ಗರೀಬ ಎಂದು ಸಹಿ ಮಾಡಿರುತ್ತಾರೆ.ಈ ರೀತಿ ಸಹಿಯನ್ನು ಬೇರೆ ವ್ಯಕ್ತಿ ಮಾಡಿರುತ್ತಾರೆ, ನಾನು ನನ್ನ ತಂದೆಯವರೇ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಇಂತಹ ವ್ಯಕ್ತಿಯೇ ಪೂರ್ಣ ಹೆಸರನ್ನು ನಮೂದು ಮಾಡಿರುವುದಿಲ್ಲ, ನಾನು 1 ನೇ ಪ್ರತಿವಾಯವರ ಮಾತನ್ನು ಕೇಳಿ ಮಾನ್ಯ



ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ-5 ಕ್ಕೆ ಇನ್ನೊಬ್ಬರು ಯಾರು ಸಹಿ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಇಂತಹ ವ್ಯಕ್ತಿ ನಿ.ಡಿ-5 ಕ್ಕೆ ಇನ್ನೊಂದು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದು ನಾನು ನನ್ನ ಪ್ರಮಾಣ ಪತ್ರದಲ್ಲಿ ನಮೂದಿಸಿರುತ್ತೇನೆಯೇ ಎಂದರೆ ನನಗೆ ಗೊತ್ತಿಲ್ಲ. ನಾನು ಸಧ್ಯ ದರ್ಗಾದಲ್ಲಿ ಪಂಚರಾಗಿ ಕೆಲಸವನ್ನು ಮಾಡುತ್ತಿಲ್ಲ. ಸದರಿ ದಾವೆಯಲ್ಲಿ ನಮೂದಿಸಿರುವ ದಾವಾ ಆಸ್ತಿಯು ಉತಾರದಲ್ಲಿ ಯಾರ ಹೆಸರಿನಲ್ಲಿ ನಮೂದಾಗಿರುತ್ತದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಇಲ್ಲಿವರೆಗೂ ವಾದಿಗಳ ಕಬ್ಜೆ ವಹಿವಾಟಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ವಾದಿಗಳು ದಾವಾ ಆಸ್ತಿಯಲ್ಲಿ ಶೆಡ್ಡನ್ನು ಕಟ್ಟಿಕೊಂಡು ಅಲ್ಲಿ ಕಟ್ಟಿಗೆ ಬಣವೆ, ಕುಳ್ಳಿನ ಬಣವೆ

ಹಾಕಿಕೊಂಡು ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯವರು ದಾವಾ ಸ್ವತ್ತಿನಲ್ಲಿ ವಹಿವಾಟನ್ನು ಮಾಡುತ್ತಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. 1 ನೇ ವಾದಿಯ ಗಂಡ ಹಾಗೂ 2 ನೇ ವಾದಿಯ ತಂದೆ ಸುಮಾರು 40–45 ವರ್ಷಗಳ ಹಿಂದೆ 1 ನೇ ಪ್ರತಿವಾದಿಯವರ ತಂದೆಗೆ ದಾವಾ ಸ್ವತ್ತನ್ನು ಖರೀದಿಗೆ ಕೊಟ್ಟಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ತನ್ನ ಜೀವಿತಾವಧಿಯಲ್ಲಿ ನಿ.ಡಿ–5 ಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ರೀತಿ ನನ್ನ ತಂದೆ ನಿ.ಡಿ–5 ಕ್ಕೆ ಸಹಿಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಇರುವ ವಿಚಾರಗಳ ಮಾಹಿತಿ ನನಗೆ ಇರುತ್ತದೆ. ಅದನ್ನು ನಾನೇ ಹೇಳಿ ಬರೆಸಿರುತ್ತೇನೆ. ನನಗೆ ದಾವೆಯ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ 1 ನೇ ಪ್ರತಿವಾದಿಯವರ ಮಾತಿನ ಮೇರೆಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.



**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/–
ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ